ಅಂದು ಲ್ಯಾಂಡ್ ಲೈನ್‌ಗೆ ಓರ್ವ ಅಪರಿಚಿತ ಮಹಿಳೆಯಿಂದ ಫೋನ್ ಬಂತು. ಲಾರ್ಸ್ ತನ್ನಿಬ್ಬರು ಮಿತ್ರರೊಂದಿಗೆ ಪ್ಯಾರಿಸ್‌ಗೆ ಹೋಗಿದ್ದ. ನನ್ನ ಬಿಜಿನೆಸ್ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ನನಗೆ ಹೇಳಿ ಹೋಗಿದ್ದ. ಹೀಗಾಗಿ ನಾನೇ ರಿಸೀವರ್ ಎತ್ತಿದ್ದೆ.

'ಹಲೋ!'

ಅಪರಿಚಿತ ಧ್ವನಿಯನ್ನು ಕೇಳಿ ನನಗೆ ಆಶ್ಚರ್ಯವಾಯಿತು.

'ಹಲೋ... ಲಾರ್ಸ್...'

'ಅವರು ಮನೆಯಲ್ಲಿಲ್ಲ.'

'ಎಲ್ಲಿಗೆ ಹೋಗಿದ್ದಾರೆ?'

'ಪ್ಯಾರಿಸ್.'

'ಓಹ್...'

'ನೀವ್ಯಾರು?' ನಾನು ಕೇಳಿದೆ.

ಮೌನ ಕವಿಯಿತು.

'ಬಹುಶಃ ಲಾರ್ಸ್ ನಿಮಗೆ ನನ್ನ ಬಗ್ಗೆ ಹೇಳಿರಬಹುದು... ನಾನು ಎಮಿಲಿ.'

ಲಾರ್ಸ್‌ನ ಮಾಜಿ ಪ್ರೇಯಸಿ ಎಮಿಲಿ... ನನಗೆ ಮತ್ತೂ ಆಶ್ಚರ್ಯವಾಯಿತು. ನಾನೆಂದೂ ಲಾರ್ಸ್‌ನ ಹಿಂದಿನ ಜೀವನದ ಬಗ್ಗೆ ಹೆಚ್ಚು ವಿಚಾರಿಸಿರಲಿಲ್ಲ, ಆದರೂ ನನಗೆ, ಅವನು ನನಗಿಂತ ಮೊದಲು ಇಬ್ಬರು ಯುವತಿಯರೊಂದಿಗೆ ರಿಲೇಶನ್‌ಶಿಪ್‌ನಲ್ಲಿದ್ದ, ಎಮಿಲಿಯೊಂದಿಗೆ ಇಡೀ ಐದು ವರ್ಷಗಳಿದ್ದ ಎಂಬುದು ನನಗೆ ಗೊತ್ತಿತ್ತು.

'ಹೇಳಿ, ಫೋನ್ ಮಾಡಿದ್ದು...?' ನಾನು ತಾಳ್ಮೆಯಿಂದ ಕೇಳಿದೆ.

ಅವಳು ನಿಟ್ಟುಸಿರು ಬಿಡುತ್ತಾ ಹೇಳಿದ ಮಾತುಗಳ ಸಾರಾಂಶ ಹೀಗಿತ್ತು: ಅವಳ ಮನೆ ಮಾಲೀಕ ಅವಳನ್ನು ಪೀಡಿಸುತ್ತಿದ್ದಾನೆ. ಅವನು ಅವಳ ವಿರುದ್ಧ ಮೊಕದ್ದಮೆಯನ್ನು ಹಾಕಿದ್ದಾನೆ. ಅವಳು ಲಾರ್ಸ್‌ನ ಸಹಾಯವನ್ನು ಬಯಸುತ್ತಾಳೆ. ಲಾರ್ಸ್ ಆ ಮನೆಯಲ್ಲಿ ಅವಳೊಂದಿಗೆ ಐದು ವರ್ಷ ಇದ್ದ. ಮನೆಯ ಮಾಲೀಕ ಒಳ್ಳೆಯ ವ್ಯಕ್ತಿಯಲ್ಲ ಎಂದು ಲಾರ್ಸ್ ಬರೆದುಕೊಡಲಿ ಎಂದು ಅವಳು ಬಯಸುತ್ತಿದ್ದಳು.

ಎಮಿಲಿಯೊಂದಿಗೆ ಮಾತುಕತೆ ನಡೆಯಿತು. ನಮ್ಮ ಮಾತುಕತೆಯಲ್ಲಿ ಸಹಜತೆ ಬಂತು. ಮಾತಿನ ಮಧ್ಯೆ ಅವಳು ಕೇಳಿದಳು,

'ಲಾರ್ಸ್‌ನೊಂದಿಗೆ ಯಾವಾಗಿನಿಂದ ಇರುವಿರಿ?'

'ಐದು ವರ್ಷಗಳಾದವು' ಎಂದೆ.

'ಮಗುವೇನಾದರೂ...?'

'ಮೊದಲ ಪತಿಯ ಒಬ್ಬ ಮಗನಿದ್ದಾನೆ, ಆದರೆ ಲಾರ್ಸ್‌ನಿಂದ ಇನ್ನೂ...'

ಅವಳು ನನ್ನನ್ನು ತಡೆದು ಹೇಳಿದಳು, 'ಅವನಿಂದ ನಿಮಗೆ ಮಗು ಹುಟ್ಟಲ್ಲ. ನಾನು ಲಾರ್ಸ್‌ನೊಂದಿಗೆ ಐದು ವರ್ಷಗಳಿಂದ ಇದ್ದೆ, ನಾನೂ ಪ್ರೆಗ್ನೆಂಟ್ ಆಗಲಿಲ್ಲ. ಲಾರ್ಸ್‌ಗೆ ಅವನ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಭಯಾನಕವಾದ ಆಕ್ಸಿಡೆಂಟ್ ಆಗಿತ್ತು. ನಿಮಗಿದು ಗೊತ್ತಾ...? ಅವನು ಬದುಕಿದ್ದೇ ಹೆಚ್ಚು.'

'ಹೂಂ... ಅವನು ತನ್ನ ಆಕ್ಸಿಡೆಂಟ್ ಬಗ್ಗೆ ಹೇಳಿದ್ದ.'

## ಕಳೆದ ಸಂಚಿಕೆಯಲ್ಲಿ



ಬದುಕು ಸುಂದರವಾಗಿದೆ ಎಂದು ಭಾಸವಾಗುತ್ತಿರುವಾಗಲೇ ಇಮಿಗ್ರೇಷನ್ ಇಲಾಖೆಯಿಂದ ಕೆಟ್ಟಸುದ್ದಿ ಬರಸಿಡಿಲಿನಂತೆ ಎರಗಿತ್ತು. ಡೆನ್ಮಾರ್ಕ್‌ನಲ್ಲಿ ಉಳಿಯಲು ನ್ಯಾನ್ಸಿಗಷ್ಟೇ ಅನುಮತಿ ದೊರೆತಿತ್ತು. ದೇಶ ಬಿಟ್ಟು ಹೋಗುವಂತೆ ಜೋಶುಆಗೆ ಆದೇಶಿಸಲಾಗಿತ್ತು. ಮಗನನ್ನು ತನ್ನ ಬಳಿಯೇ ಉಳಿಸಿಕೊಳ್ಳಲು ನ್ಯಾನ್ಸಿ ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ಲಾರ್ಸ್ ಅವಳ ನೆರವಿಗೆ ಬರಲು ನಿರಾಕರಿಸಿದ. ವಿಧಿಯಿಲ್ಲದೆ ಅಬ್ರಹಾಮ್‌ನನ್ನು ಸಂಪರ್ಕಿಸಬೇಕಾಯಿತು. ಮಗನನ್ನು ತನ್ನ ಬಳಿ ಇರಲು ಅವನು ಒಪ್ಪಿಕೊಂಡ. ಆದರೆ, ಸ್ವಲ್ಪ ಸಮಯದಲ್ಲೇ ಅವನು ಚರ್ಚ್‌ನಿಂದ ಹೊರದೂಡಿಸಿಕೊಂಡ. ನೈರೋಬಿಗೆ ಹೋಗಿ ವ್ಯಾಪಾರ ಮಾಡಲು ಮುಂದಾದ. ಅವನಿಗೆ ತನ್ನಿಂದಾದಷ್ಟು ಹಣಕಾಸಿನ ಸಹಾಯವನ್ನು ನ್ಯಾನ್ಸಿ ಮಾಡಿದಳು. ಅದೇ ಸಮಯಕ್ಕೆ ತನ್ನ ಹೊಸ ಸಂಗಾತಿ ಲಾರ್ಸ್‌ನ ಮತ್ತೊಂದು ಮುಖ ಅವಳಿಗೆ ಗೋಚರಿಸತೊಡಗಿತು. ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದ ಅವನು ನ್ಯಾನ್ಸಿಯೊಂದಿಗೆ ಹಿಂಸಾತ್ಮಕವಾಗಿ ನಡೆದುಕೊಳ್ಳಲು ಆರಂಭಿಸಿದ.

'ಆ ಆಕ್ಸಿಡೆಂಟ್‌ನಲ್ಲಿ ಏನೋ ಆಗಿದೆ. ಅವನ ಟೆಸ್ಟಿಸ್‌ನಲ್ಲೂ ಪೆಟ್ಟುಗಳಿದ್ದವು. ಬಹುಶಃ ಅದೇ ಕಾರಣದಿಂದ ಅವನಲ್ಲಿ ಇನ್‌ಫರ್ಟಿಲಿಟಿ ಬಂತು, ಆದರೆ ಅವನು ಇದನ್ನು ನಂಬಲ್ಲ, ವೈದ್ಯರ ಬಳಿಗೆ ಹೋಗುವುದಕ್ಕೂ ಇಷ್ಟಪಡಲ್ಲ.'

ಎಮಿಲಿ ನನ್ನ ಅನುಮಾನವನ್ನು ವಾಸ್ತವದಲ್ಲಿ ಬದಲಾಯಿಸಿದ್ದಳು. ಲಾರ್ಸ್ ಎಂದೂ ತಂದೆಯಾಗಲಾರ... ನಾನು ಗಾಢವಾಗಿ ಯೋಚಿಸಲಾರಂಭಿಸಿದೆ. ಲಾರ್ಸ್ ಆಕ್ಸಿಡೆಂಟ್ ಬಗ್ಗೆಯಂತೂ ಹೇಳಿದ್ದ, ಆದರೆ ಅಷ್ಟು ಸೂಕ್ಷ್ಮವಾಗಿ ಹೇಳಿರಲಿಲ್ಲ. ನನಗೆ ಮಗುವಿನ ಬಗ್ಗೆ ಅಷ್ಟು ದುರಾಸೆ ಸಹ ಇರಲಿಲ್ಲ, ನನ್ನ ಜೋಶ್‌ಆ ನನಗೆ ಸಾಕು. ಆದರೆ ಲಾರ್ಸ್ ಈ ವಿಷಯದಲ್ಲಿ ಉದಾಸೀನತೆಯನ್ನು ಮಾಡಬಾರದು. ಅವನು ನಾನೇ ಬಂಜೆಯಾಗಿದ್ದೇನೆಂಬ ಸಂದೇಹವನ್ನು ನನ್ನಲ್ಲಿ ಮೂಡಿಸಬಾರದಿತ್ತು. ನಾನು ಏಸು ದೇವರಲ್ಲಿ ಮಗುವಿಗಾಗಿ ಪ್ರಾರ್ಥಿಸುತ್ತಿದ್ದೆ. ಚರ್ಚ್‌ನಲ್ಲಿ ಮೇಣದಬತ್ತಿಗಳನ್ನು ಹಚ್ಚಿ ಪ್ರಾರ್ಥಿಸಿದೆ. ಲಾರ್ಸ್ ಮೌನವಾಗಿ ಎಲ್ಲವನ್ನೂ ನೋಡುತ್ತಿದ್ದ, ಏನನ್ನೂ ಹೇಳಲಿಲ್ಲ.

ಎಮಿಲಿ ನನಗೆ ಮತ್ತೊಂದು ವಿಷಯವನ್ನು ಹೇಳಿದಳು. ಅದನ್ನು ಕೇಳಿ ಆಶ್ಚರ್ಯದೊಂದಿಗೆ, ತುಂಬಾ ದುಃಖವಾಯಿತು. ಲಾರ್ಸ್ ಮೂರು ವರ್ಷಗಳ ಕಾಲ ಕಮ್ಯೂನ್ ಹೋಮ್‌ನಲ್ಲಿ ಬೆಳೆದಿದ್ದ. ಅವನ ತಂದೆ–ತಾಯಿಯ ನಡುವೆ ಜಗಳವಾಗುತ್ತಿತ್ತು, ಅವನ ತಾಯಿ ಲಾರಾ ಹುಚ್ಚಿಯಂತಾಗಿದ್ದಳು. ಅವಳಿಗೆ ನರ್ವಸ್ ಬ್ರೇಕ್‌ಡೌನ್ ಆಗುತ್ತಿತ್ತು. ಲಾರ್ಸ್‌ನ ಶಾಲೆ ಕಮ್ಯೂನ್‌ನಲ್ಲಿ ದೂರಿತ್ತಳು, ನೆರೆಹೊರೆಯವರು ಸಹ ದೂರಿತ್ತರು. ಲಾರಾ ಮತ್ತು ಡೇನಿಯಲ್ ತಮ್ಮ ಮಗುವನ್ನು ಸೂಕ್ತವಾಗಿ ಪಾಲನೆ ಮಾಡುವಲ್ಲಿ ಸಂಪೂರ್ಣವಾಗಿ ಅಸಮರ್ಥರಾಗಿದ್ದಾರೆ ಎಂದು ಸರ್ಕಾರಕ್ಕೆ ಮನವರಿಕೆಯಾಯಿತು. ಲಾರ್ಸ್ ಐದು ವರ್ಷದವನಿದ್ದಾಗ, ಕಮ್ಯೂನ್ ಅವನ ತಂದೆ–ತಾಯಿಯಿಂದ ಲಾರ್ಸ್‌ನನ್ನು ಪಡೆದಿತ್ತು. ಮೂರು ವರ್ಷಗಳ ಕಾಲ ಅವನನ್ನು ಫೋಸ್ಟರ್ ಪೇರೆಂಟ್ಸ್‌ನೊಂದಿಗೆ ಬಿಟ್ಟರು.

ಎಲ್ಲವನ್ನೂ ತಿಳಿದ ನಂತರ ನನಗೆ ಲಾರ್ಸ್ ಬಗ್ಗೆ ಸಹಾನುಭೂತಿ ಹುಟ್ಟಿತು. ಆದರೆ ಅವನು ಇದೆಲ್ಲವನ್ನೂ ನನಗೇಕೆ ಹೇಳಲಿಲ್ಲ? ನನ್ನನ್ನು ಅಷ್ಟು ಹೊರಗಿನವಳು ಎಂದು ತಿಳಿದನೇ! ಅವನ ತಾಯಿ ಲಾರಾರೊಂದಿಗೆ ನನಗೆ ತುಂಬಾ ಗೆಳೆತನವಿತ್ತು, ಅವರು ಜಗತ್ತಿನ ವಿಷಯಗಳ ಬಗ್ಗೆ ನನ್ನೊಂದಿಗೆ ಮಾತನಾಡುತ್ತಾರೆ, ಆದರೆ ಅವರು, ಲಾರ್ಸ್ ಫೋಸ್ಟರ್ ಹೋಮ್‌ನಲ್ಲಿ ಬೆಳೆದ ವಿಷಯವನ್ನು ಎಂದೂ ಹೇಳಲಿಲ್ಲ... ಸರಿ, ಅವಳು ಎಷ್ಟಾದರೂ ಓರ್ವ ತಾಯಿ; ತನ್ನ ಮಗನ ಹೇಳಲು–ಕೇಳಲು ಯೋಗ್ಯವಲ್ಲದ ವಿಷಯಗಳನ್ನೇಕೆ ಹೇಳುತ್ತಾಳೆ?

ಲಾರ್ಸ್ ಪ್ಯಾರಿಸ್‌ನಿಂದ ಮರಳಿ ಬರುವುದನ್ನು ನಾನು ಕಾತರದಿಂದ ನಿರೀಕ್ಷಿಸುತ್ತಿದ್ದೆ. ನಾವು ನಿತ್ಯ ಫೋನ್‌ನಲ್ಲಿ ಮಾತನಾಡುತ್ತಿದ್ದೆವು, ಆದರೆ ಫೋನ್‌ನಲ್ಲಿ ಈ ವಿಷಯವನ್ನು ಮಾತನಾಡುವುದು ಉಚಿತವಲ್ಲವೆಂದು ತಿಳಿದೆ. ಫೋನ್‌ನಲ್ಲಿ ಅವನ ಕ್ಷೇಮಸಮಾಚಾರವನ್ನಷ್ಟೇ ಕೇಳುತ್ತಿದ್ದೆ. ಅವನು ಇಲ್ಲಿಗೆ ಬಂದಾಗ, ಈ ವಿಷಯದ ಬಗ್ಗೆ ಮನಬಿಚ್ಚಿ ಮಾತನಾಡುತ್ತೇನೆ; ನಿಮ್ಮದೇ ಸ್ವಂತ ಮಗು ಇಲ್ಲದಿದ್ದರೆ, ಬೇರಾರೂ ಕಷ್ಟದಲ್ಲಿ ಬರಲ್ಲ, ನೀವು ಜೋಶ್‌ನನ್ನು ನಿಮ್ಮ ಪುತ್ರನೆಂದು ತಿಳಿದು ಅವನನ್ನು ಸಾಕಿ ಸಲಹಿ. ಜೋಶುಆ ಲಾರ್ಸ್‌ಗೆ, ತಂದೆಯೊಬ್ಬರಿಗೆ ಸಲ್ಲುವಂಥ ಸಂಪೂರ್ಣ ಗೌರವವನ್ನು ಕೊಡುತ್ತಾನೆಂಬ ನಂಬಿಕೆ ನನಗಿದೆ ಎಂದೆಲ್ಲಾ ಹೇಳಲು ಯೋಚಿಸಿದೆ.

ಸಂಜೆಯ ಏಳು ಗಂಟೆಯಾಗಿತ್ತು. ಲಾರ್ಸ್ ಪ್ಯಾರಿಸ್‌ನಿಂದ ಮನೆಗೆ ಮರಳಿ ಬಂದ. ನಾನು ಅವನಿಗೆ ಇಷ್ಟವಾದ ಅಡುಗೆಯನ್ನು ಮಾಡಿದ್ದೆ. ಚಿಕನ್ ರೈಸ್, ರಾಯತ ಮತ್ತು ಹಪ್ಪಳ ಅವನಿಗಿಷ್ಟವಾಗಿದ್ದವು. ಮಸಾಲೆಯುಕ್ತ ರಾಯತ ಮಾಡಿ ಅದಕ್ಕೆ ಜೀರಿಗೆ ಮತ್ತು ಬೆಳ್ಳುಳ್ಳಿಯ